ಮಾನಸ ಸರೋವರ ಯಾತ್ರೆ

1207 (1544) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್.(ಚಾಮರಾಜ) : ಮಾನ್ಯ ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಈ ಸಾಲಿನ ಮಾನಸ ಸರೋವರದ ಯಾತ್ರೆಗೆ ಎಷ್ಟು ವೆಚ್ಚ ಮಾಡಲಾಗಿದೆ; ಯಾತ್ರಿಗಳ ಸಂಖ್ಯೆ ಎಷ್ಟು; (ಯಾತ್ರಿಗಳ ವಿವರ ನೀಡುವುದು);

ಆ) ಮಾನಸ ಸರೋವರ ಯಾತ್ರಿಗಳಿಗೆ ಸರ್ಕಾರದ ವತಿಯಿಂದ ನೀಡಲಾಗುತ್ತಿರುವ ಸೌಲಭ್ಯಗಳು ಏನು (ವಿವರ ನೀಡುವುದು)?

ಶ್ರೀ ಬಿ. ನಾಗರಾಜ ಶೆಟ್ಟಿ (ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು):

ಅ) ಪ್ರಸ್ತುತ ಸಾಲಿನಲ್ಲಿ ಆಯವ್ಯಯದಲ್ಲಿ ರೂ. 201.00 ಲಕ್ಷ ಅನುದಾನ ಒದಗಿಸಲಾಗಿದೆ. ಯಾತ್ರಾರ್ಥಿಗಳಿಗೆ ಇನ್ನು ಹಣ ಬಿಡುಗಡೆ ಮಾಡಿರುವುದಿಲ್ಲ. ಇಲ್ಲಿಯವರೆಗೆ ಸಹಾಯಾನುದಾನವನ್ನು ಕೋರಿ 389 ಯಾತ್ರಿಕರಿಂದ ಅರ್ಜಿ ಸ್ವೀಕೃತವಾಗಿರುತ್ತದೆ.

ಆ) 2006–07ನೇ ಸಾಲಿನಿಂದ ಕರ್ನಾಟಕದಿಂದ ಕೈಲಾಸ ಮಾನಸ ಸರೋವರ ಯಾತ್ರೆ ಕೈಗೊಳ್ಳುವ ಯಾತ್ರಿಕರಿಗೆ ಸರ್ಕಾರದ ವತಿಯಿಂದ ಸಹಾಯಧನ ನೀಡುವ ಯೋಜನೆಯನ್ನು ಜಾರಿಗೆ ತರಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ:ಕಂಇ 1/ಮುಅಬಿ/2006, ದಿನಾಂಕ: 03–06–2006ರಲ್ಲಿ ಮಾನಸ ಸರೋವರ ಯಾತ್ರೆ ಕೈಗೊಂಡ ಯಾತ್ರಿಕರಿಗೆ ಧನ ಸಹಾಯ ನೀಡುವ ಬಗ್ಗೆ ಮಾರ್ಗ ಸೂಚಿ ಹೊರಡಿಸಲಾಗಿರುತ್ತದೆ.

ಅದರಂತೆ ಯಾತ್ರೆ ಪೂರ್ಣಗೊಳಿಸಿದ ಯಾತ್ರಾರ್ಥಿಗಳಿಗೆ ರೂ. 25,000/– ಧನಸಹಾಯ ನೀಡಲಾಗುತ್ತದೆ.

1545 (1208) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್.(ಚಾಮರಾಜ) : ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಜಿಲ್ಲೆಯ ಕೃಷಿ ಮಾರುಕಟ್ಟೆ ಇಲಾಖೆಗೆ ಸೇರಿದ ಅತಿಥಿ ಗೃಹದಲ್ಲಿರುವ ಕೊಠಡಿಗಳೆಷ್ಟು? (ವಿವರ ನೀಡುವುದು);